# ನಮ್ಮ ಸಂಸ್ಕೃತಿ ಪರಿಚಯ – ೩

ಸೀತಾ ಲಖಾನಿ

ದೇವರನ್ನು ಮಗುವಿನಂತೆಯೂ ಕಾಣಬಹುದು. ಇದಕ್ಕೆ ಒಳ್ಳೆಯ ನಿದರ್ಶನವೆಂದರೆ, ಗೋಪಾಲೇರ್ ಮಾ ಎಂಬ ಭಕ್ತ ಮಹಿಳೆ. ಸುಮಾರು ನೂರೈವತ್ತು ವರ್ಷಗಳಿಗೂ ಹಿಂದೆ, ಭಾರತದಲ್ಲಿ ಗೋಪಾಲೇರ್ ಮಾ ಎಂಬ ವಯಸ್ಸಾದ ಮಹಿಳೆ ವಾಸಿಸುತ್ತಿದ್ದಳು. ಅವಳು ದೇವರನ್ನು ಬಾಲಕೃಷ್ಣನ ರೂಪದಲ್ಲಿ ಕಾಣಲು ಇಷ್ಟಪಡುತ್ತಿದ್ದಳು. ಅವಳ ಬಳಿ ಬಾಲಕೃಷ್ಣನ ಪುಟ್ಟ ಮೂರ್ತಿಯೊಂದಿತ್ತು. ಅವಳು ಪ್ರತಿದಿನವೂ ಆ ಮೂರ್ತಿಯ ಮುಂದೆ ಪ್ರಾರ್ಥನೆ ಸಲ್ಲಿಸುತ್ತಿದ್ದಳು. ಅವಳು ಕೇವಲ ಕೃಷ್ಣನ ಮೂರ್ತಿಯನ್ನು ನೋಡುವುದಕ್ಕೆ ಮಾತ್ರ ಇಷ್ಟಪಡಲಿಲ್ಲ; ನಿಜವಾದ ಕೃಷ್ಣನನ್ನೇ ನೋಡಬೇಕು ಎನ್ನುವುದೇ ಅವಳ ಆಸೆಯಾಗಿತ್ತು. ಹೀಗೆ ವರ್ಷಗಳು ಉರುಳಿದವು.



ಒಂದು ದಿನ ಅವಳು ಕೃಷ್ಣನನ್ನು ತೀವ್ರವಾಗಿ ಪ್ರಾರ್ಥಿಸುತ್ತಿದ್ದಳು. ಆಗ ಆಶ್ಚರ್ಯಕರವಾದ ಸಂಗತಿಯೊಂದು ಜರುಗಿತು. ಅವಳ ಎದುರಿಗೆ ಕೃಷ್ಣನ ಮೂರ್ತಿಯು ಕಾಣಬರಲಿಲ್ಲ; ಅದಕ್ಕೆ ಬದಲಾಗಿ ಬಾಲಕೃಷ್ಣನೇ ನಿಂತಿದ್ದನು. ಅವನು ನಗುನಗುತ್ತಾ ಇದ್ದನು. ಅವಳ ಕಡೆಗೇ ಪ್ರೀತಿಯಿಂದ ನೋಡುತ್ತ ಇದ್ದನು. ಹಾಗೂ ಅವಳೊಡನೆ ಆಟವಾಡಲು ಕೂಡ ಆರಂಭಿಸಿದನು. ಅವಳ ಸೀರೆಯನ್ನು ಹಿಡಿದು ಎಳೆದನು; ಸಿಹಿ ತಿಂಡಿ ಕೊಡು ಎಂದು ಪೀಡಿಸಿದನು. ಗೋಪಾಲೇರ್ ಮಾಗೆ ತಾನು ಕಣ್ಣೆದುರಿಗೇ ನೋಡುತ್ತಿರುವುದನ್ನು ನಂಬಲೇ ಆಗಲಿಲ್ಲ. ಅವಳು ತುಂಬ ಅಚ್ಚರಿಪಟ್ಟಳು. ಇದು ಕನಸೋ, ನನಸೋ ಎಂದು ಕಣ್ಣನ್ನು ಉಜ್ಜಿಕೊಂಡಳು. ಆದರೆ ನಿಜವಾಗಿಯೂ ಅವಳ ಮುಂದೆ ಬಾಲಕೃಷ್ಣನೇ ನಿಂತಿದ್ದನು. ಅವನು ತುಂಟನಾಗಿದ್ದನು. ಸಿಹಿತಿಂಡಿಗಾಗಿ ಅವಳನ್ನು ಕಾಡುತ್ತಿದ್ದನು.

ಗೋಪಾಲೇರ್ ಮಾಗೆ ಎಷ್ಟು ಸಂತೋಷವಾಯಿತೆಂದರೆ, ಅವಳ ಕಣ್ಣುಗಳಿಂದ ಆನಂದದ ಕಣ್ಣೀರು ಸುರಿಯಲಾರಂಭಿಸಿತು. ಅವಳು ಕೃಷ್ಣನಿಗೆ ಸಿಹಿತಿಂಡಿಗಳನ್ನು ಕೊಟ್ಟಳು; ಅವನೊಡನೆ ಮಾತನಾಡಿದಳು; ಅವನೊಡನೆ ಆಟವನ್ನೂ ಆಡಿದಳು. ಪುಟಾಣಿ ಮಗುವಿನ ರೂಪದಲ್ಲಿ ದೇವರನ್ನು ಕಾಣುವುದು ಎಂಥ ಆನಂದದ ಅನುಭವ, ಅಲ್ಲವೇ! ಗೋಪಾಲೇರ್ ಮಾ ತನ್ನ ಜೀವನದ ಬಹುಭಾಗವನ್ನು ದೇವರನ್ನು ಬಾಲಕೃಷ್ಣನ ರೂಪದಲ್ಲಿ ನೋಡುತ್ತಲೇ ಕಳೆದಳು.

ಈ ಕಥೆಯಿಂದ ನಾವು ಏನನ್ನು ತಿಳಿದುಕೊಳ್ಳಬಹುದು? ನಮಗೆ ದೇವರಲ್ಲಿ ನಿಜವಾದ ಪ್ರೀತಿ ಇರಬೇಕು. ಅವನನ್ನು ಕಾಣಬೇಕು ಎನ್ನುವ ಹಂಬಲ ಇರಬೇಕು. ಆಗ ಅವನು, ನಮಗೆ ಇಷ್ಟವಾದ ರೂಪದಲ್ಲಿ ಬಂದು ಪ್ರತ್ಯಕ್ಷನಾಗುತ್ತಾನೆ. ಗೋಪಾಲೇರ್ ಮಾ ದೇವರನ್ನು ಬಾಲಕೃಷ್ಣನ ರೂಪದಲ್ಲಿ ಕಾಣಲು ಇಷ್ಟಪಟ್ಟಳು. ಆದ್ದರಿಂದ ದೇವರು ಅವಳಿಗೆ ಬಾಲಕೃಷ್ಣನ ರೂಪದಲ್ಲಿ ಕಾಣಿಸಿಕೊಂಡನು. ದೇವರು ಇರುವುದನ್ನು  ನಾವು ಧ್ಯಾನದಲ್ಲಿ ಅನುಭವಿಸಬಹುದು; ನೇರವಾಗಿ ನೋಡಲೂಬಹುದು.

## ದೇವರನ್ನು ತಂದೆಯಂತೆ ನೋಡುವುದು : ತ್ರಿಮೂರ್ತಿಗಳ ಪರಿಚಯ – ಬ್ರಹ್ಮ, ವಿಷ್ಣು, ಶಿವ



**ಬ್ರಹ್ಮ :** ಜಗತ್ತನ್ನು ಹುಟ್ಟಿಸಿದವನು ಎಂದು ದೇವರನ್ನು ಚಿಂತಿಸಿದಾಗ, ಅವನಿಗೆ 'ಬ್ರಹ್ಮ' ಎಂಬ ಹೆಸರನ್ನು ಹಿಂದೂಗಳು ನೀಡುವರು. ಅವನಿಗೆ ನಾಲ್ಕು ತಲೆಗಳಿವೆ; ನಾಲ್ಕು ಕೈಗಳಿವೆ. ಅವನು ವೇದಗಳನ್ನು ಕೈಯಲ್ಲಿ ಹಿಡಿದುಕೊಂಡಿದ್ದಾನೆ. ಅವನು ಕಮಲದ ಮೇಲೆ ಕುಳಿತುಕೊಂಡಿದ್ದಾನೆ.



**ವಿಷ್ಣು:** ಜಗತ್ತಿನ ಪಾಲನೆ ಮಾಡುವವನು ಎಂದು ದೇವರನ್ನು ಆಲೋಚಿಸಿದಾಗ, ಅವನಿಗೆ 'ವಿಷ್ಣು' ಎಂಬ ಹೆಸರನ್ನು ಹಿಂದೂಗಳು ನೀಡುವರು. ಅವನಿಗೆ ನಾಲ್ಕು ಭುಜಗಳಿವೆ. ಅವನು ರಾಕ್ಷಸರನ್ನು ನಾಶಮಾಡಲು ದಿವ್ಯವಾದ ಆಯುಧಗಳನ್ನು ಧರಿಸಿದ್ದಾನೆ. ಅವನು ಅವತಾರಗಳ ರೂಪದಲ್ಲಿ ಭೂಮಿಯಲ್ಲಿ ಜನ್ಮ ಪಡೆಯುತ್ತಾನೆ. ಜನರಿಗೆ ಧರ್ಮದ ಬಗ್ಗೆ ತಿಳಿಸಿಕೊಡುವುದಕ್ಕೆ ಮತ್ತು ಸಜ್ಜನರನ್ನು ರಕ್ಷಿಸುವುದಕ್ಕೆ ಅವನು ಜನ್ಮವೆತ್ತುತ್ತಾನೆ. ವಿಷ್ಣುವಿನ ಎರಡು ಪ್ರಸಿದ್ಧ ಅವತಾರಗಳೆಂದರೆ, 'ರಾಮ' ಮತ್ತು 'ಕೃಷ್ಣ'.  ಹಲವಾರು ಹಿಂದೂಗಳು ರಾಮ ಮತ್ತು ಕೃಷ್ಣರನ್ನು ದೇವರೆಂದೇ ಪೂಜಿಸುತ್ತಾರೆ.



**ಶಿವ:** ಅನೇಕ ಹಿಂದೂಗಳು ದೇವರನ್ನು 'ಶಿವ' ರೂಪದಲ್ಲಿ ಪೂಜಿಸುತ್ತಾರೆ. ಅವನು ಜಗತ್ತನ್ನು ಸೃಷ್ಟಿಸುತ್ತಾನೆ ಮತ್ತು ಕಡೆಗೆ ಅದನ್ನು ತನ್ನೊಳಗೆ ಲಯವನ್ನೂ ಮಾಡಿಕೊಳ್ಳುತ್ತಾನೆ ಎಂದು  ಭಕ್ತರು ನಂಬುತ್ತಾರೆ. ಶಿವ ಕೈಲಾಸದಲ್ಲಿ ಧ್ಯಾನದಲ್ಲಿ ಕುಳಿತಿರುವಂತೆ ಅವನನ್ನು ಚಿತ್ರಿಸುತ್ತಾರೆ. ಗಂಗೆ ಅವನ ಜಟೆಯಿಂದ ಇಳಿದುಬರುತ್ತಾಳೆ. ಚಂದ್ರ ಅವನ ಹಣೆಯಲ್ಲಿ ಶೋಭಿಸುತ್ತಾನೆ. ಅವನು ಚರ್ಮವನ್ನು ಧರಿಸಿರುತ್ತಾನೆ. ಕೊರಳಿಗೆ ಹಾವನ್ನು ಆಭರಣವಾಗಿ ಸುತ್ತಿಕೊಂಡಿರುತ್ತಾನೆ. ಡಮರು, ತ್ರಿಶೂಲಗಳನ್ನು ಹಿಡಿದುಕೊಂಡಿರುತ್ತಾನೆ.